| | |
|---|---|
| ಪ್ರಾಸಾ | 04 |
| ಚಾಸಾ | 05 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ: 70/2024**

**ದಿನಾಂಕ: 01.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಆಂಜಿನಪ್ಪ |
| ತಂದೆಯ ಹೆಸರು | : | ಲೇಟ್. ಕುರಿಗಂಗಪ್ಪ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಗೌರಿಬಿದನೂರು ತಾಲ್ಲೂಕು, ಶಂಬೂಕನಗರ ಗ್ರಾಮ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಸಾಕ್ಷಿಯು ದಿಃ 02.03.2024 ರ ನೋಟೀಸ್ ಮತ್ತು ನಿಪಿ 2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ನೋಟೀಸ್ ನ್ನು ನಿಪಿ 14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿಃ 02.03.2024 ರಂದು

| | |
|---|---|
| ಪ್ರಾಸಾ | 04 |
| ಚಾಸಾ | 05 |

ಸಂಜೆ 5.00 ರಿಂದ 5.30 ರ ಮಧ್ಯೆ ಕೆಲಸದಿಂದ ಬರುವಾಗ ಸಬ್ ಇನ್ಸ್ ಪೆಕ್ಟರ್ ಜೀಪಿನಲ್ಲಿ ಸಬ್ ಇನ್ಸ್ ಪೆಕ್ಟರ್ ಅವರು ಇದ್ದರು, ಆಗ ಅವರು ಸಹಿ ಹಾಕು ಎಂದು ಹೇಳಿದರು, ನಾನು ಸಹಿ ಹಾಕಿರುತ್ತೇನೆ. ಅಲ್ಲಿ ಪೊಲೀಸರು inspection ಗೆ ಬಂದಿದ್ದೇವೆ ಎಂದು ಹೇಳಿದ್ದರು, ಆ ಕಾರಣಕ್ಕೆ ಸಹಿ ಹಾಕಿರುತ್ತೇನೆ. ಸದರಿ ಸಮಯ ನನ್ನೊಂದಿಗೆ ಇಬ್ಬರು-ಮೂವರು ಇದ್ದರು, ಏನು ಗಲಾಟೆ ಎಂದು ನಮಗೆ ಹೇಳಲಿಲ್ಲ. ನಿಪಿ 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ನಾನು ಓದಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>**

2. ದಿಃ 02.03.2024 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ. ಸದರಿ ಸಮಯ ದೂರುದಾರರು ಇದ್ದರು ಎಂದರೆ ಸರಿಯಲ್ಲ. ದೂರುದಾರರು ಹಾಜರಿದ್ದು, ಅದೇ ಸ್ಥಳದಲ್ಲಿ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದು ಎಂದು ತೋರಿಸಿದ್ದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿ, ಮಹಜರ್ ಸಮಯದಲ್ಲಿ ನಾನು ಹಾಜರಿದ್ದು ಸಹಿ ಮಾಡಿದ್ದೇನೆಂದರೆ

| | |
|---|---|
| ಪ್ರಾಸಾ | 04 |
| ಚಾಸಾ | 05 |

ಸರಿಯಲ್ಲ. ಸದರಿ ಸಮಯ ರಮೇಶ್ ಎಂಬುವವರು ನನ್ನೊಂದಿಗೆ ಇದ್ದರು ಎಂದರೆ ಸರಿ. ಸದರಿ ದಿನ ಪೊಲೀಸರು ಮಹಜರ್ ಗೆ ಬಂದು ನನ್ನ ಸಮಯಕ್ಷಮ ಮಹಜರ್ ತಯಾರಿಸಿದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿ.ಎನ್.ಕೆ. ವಕೀಲರು ಚೀಫ್ ಡಿಫೆನ್ಸ್ ಕೌನ್ಸಲ್ ರವರಿಂದ ಃ-</u>**

ಇರುವುದಿಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ 01.04.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**